ದಿನಾಂಕಃ 14.06.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿರುವ ಸಹಿಗಳು ನನ್ನವೇ ಆಗಿರುತ್ತವೆ. ಆ ಪ್ರಮಾಣ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಅದರಲ್ಲಿ ಏನೇನು ಬರೆದಿದೆ ಎಂದು ನನಗೆ ಗೊತ್ತಿದೆ.

ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಜಿಕೆಜಿ ವಕೀಲರಿಂದ.
(ವಾದಿಯು ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು)

ಕಡಹಳ್ಳಿ ಗ್ರಾಮದ ಸರ್ವೇ ನಂ 63 ಬಿ ಯ ಉತಾರವನ್ನು ನಿಪಿ 1 ಎಂದು,
ಸರ್ವೇ ನಂ. 3ಃ17 ರ ಉತಾರವನ್ನು ನಿಪಿ 2 ಎಂದು,
ಸರ್ವೇ ನಂ. 16 ರ ಉತಾರವನ್ನು ನಿಪಿ 3 ಎಂದು,
ಸರ್ವೇ ನಂ. 16ಃ1 ರ ಉತಾರವನ್ನು ನಿಪಿ 4 ಎಂದು,
ಸರ್ವೇ ನಂ. 17ಃ3 ರ ಉತಾರವನ್ನು ನಿಪಿ 5 ಎಂದು,
ಸರ್ವೇ ನಂ. 19ಃ1 ರ ಉತಾರವನ್ನು ನಿಪಿ 6 ಎಂದು,
ಸರ್ವೇ ನಂ. 35ಃ1 ರ ಉತಾರವನ್ನು ನಿಪಿ 7 ಎಂದು,
ಸರ್ವೇ ನಂ. 36ಃ1 ರ ಉತಾರವನ್ನು ನಿಪಿ 8 ಎಂದು,
ಸರ್ವೇ ನಂ. 36ಃ3ಎ4 ರ ಉತಾರವನ್ನು ನಿಪಿ 9 ಎಂದು,
ಸರ್ವೇ ನಂ. 43ಃ3 ರ ಉತಾರವನ್ನು ನಿಪಿ 10 ಎಂದು,
ಸರ್ವೇ ನಂ. 43ಃ8 ರ ಉತಾರವನ್ನು ನಿಪಿ 11 ಎಂದು,
ಸರ್ವೇ ನಂ. 9 ರ ಉತಾರವನ್ನು ನಿಪಿ 12 ಎಂದು,
ಸರ್ವೇ ನಂ. 73 ರ ಉತಾರವನ್ನು ನಿಪಿ 13 ಎಂದು,
ಎಂಎಂ ತಡಸ ಆಸ್ತಿ ಸಂಖ್ಯೆ 63 ಬಿ ಯ ಕರಆಕರಣೆಯ ಯಾದಿಯನ್ನು ನಿಪಿ 14 ಎಂದು,
ನಮೂನೆ 7 ರ ಧೃಡೀಕೃತ ನಕಲನ್ನು ನಿಪಿ 15 ಎಂದು,
ಮಂಜೂರಾತಿಯ ಆದೇಶ ಅಥವಾ ನಮೂನೆ 10 ರ ಧೃಡೀಕೃತ ನಕಲನ್ನು ನಿಪಿ 16 ಎಂದು,
ಹಕ್ಕು ಬದಲಾವಣೆ ಸಂಖ್ಯೆ 268ಃ1983 ರ ಧೃಡೀಕೃತ ನಕಲನ್ನು ನಿಪಿ 17 ಎಂದು,
ಹಕ್ಕು ಬದಲಾವಣೆ ಸಂಖ್ಯೆ 242ಃ1981 ರ ಧೃಡೀಕೃತ ನಕಲನ್ನು ನಿಪಿ 18 ಎಂದು,
ಹಕ್ಕು ಬದಲಾವಣೆ ಸಂಖ್ಯೆ 9ಃ1955 ರ ಧೃಡೀಕೃತ ನಕಲನ್ನು ನಿಪಿ 19 ಎಂದು
ಹಕ್ಕು ಬದಲಾವಣೆ ಸಂಖ್ಯೆ 358 ರ ಧೃಡೀಕೃತ ನಕಲನ್ನು ನಿಪಿ 20 ಎಂದು
ವಂಶವೃಕ್ಷವನ್ನು ನಿಪಿ 21 ಎಂದು
ದಿಃ 1.7.16 ರ ಇನ್ನೊಂದು ವಂಶವೃಕ್ಷವನ್ನು ನಿಪಿ 22 ಎಂದು ಗುರುತಿಸಲಾಯಿತು.

ಪಾಟಿ ಸವಾಲುಃ- ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.

ದಿನಾಂಕಃ 18.07.2017 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು- 3, 5 ರಿಂದ 9 ನೇ ಪ್ರತಿವಾದಿ ಪರ ವಕೀಲರಿಂದ

ದಾವಾ ಆಸ್ತಿಗಳು ಹನುಮಂತಗೌಡ ಮಲ್ಲನಗೌಡ ಅವರಿಗೆ ಭೂನ್ಯಾಯಮಂಡಳಿಯಿಂದ ಮಂಜೂರಾದ ಆಸ್ತಿಗಳು ಎಂದರೆ ಸರಿ. ಕಡಹಳ್ಳಿ ಗ್ರಾಮದ ಆಸ್ತಿ ಸಂಖ್ಯೆ 63ಃಬಿ ಈಗಲೂ ಸಹ ಹನುಮಂತಗೌಡ ಮಲ್ಲನಗೌಡ ಅವರ ಹೆಸರಿನಲ್ಲಿ ಇವೆ ಎಂದರೆ ಸರಿ. ದಾವಾ ಆಸ್ತಿಗಳು ವಾದಿ, ಪ್ರತಿವಾದಿಗಳ ಹೆಸರಿನಲ್ಲಿ ಇರುವ ಆಸ್ತಿಗಳು ಎಂದರೆ ಸರಿ. ವಾದಿ, ಪ್ರತಿವಾದಿಗಳ ನಡುವೆ ಆಸ್ತಿ ವಿಭಾಗವಾಗಿಲ್ಲ ಎಂದರೆ ಸರಿ.

ಪಾಟಿ ಸವಾಲುಃ- 4ನೇ ಪ್ರತಿವಾದಿ ಪರ ಶ್ರೀ ಎಂಜಿವಿ ವಕೀಲರಿಂದ

ಪ್ರತಿವಾದಿ ಸಂಖ್ಯೆ 4 ರವರಿಗೆ ದಾವಾ ಆಸ್ತಿಯಲ್ಲಿ ವಿಭಾಗ ಕೊಡಬಹುದು.
ಉಳಿದ ಮೇಲಿನ ಪಾಟಿ ಸವಾಲನ್ನು ತಮ್ಮ ಪಾಟಿ ಸವಾಲಾಗಿ ಅಳವಡಿಸಿಕೊಳ್ಳಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.